ಕೂಡ ಹುಟ್ಟಿತು. 1958ರಲ್ಲಿ ಗೋಪಾಲಕೃಷ್ಣ ಅಡಿಗರು ಬರೆದ 'ನೆಹರು ನಿವೃತ್ತರಾಗುವುದಿಲ್ಲ' ಎಂಬ ವಿಡಂಬನಾತ್ಮಕ ಪದ್ಯದ ನೆಹರು ಚಿತ್ರಗಳು:

ಭರತವಾಕ್ಯಕು ಬೆದರನೀತ ಧೀರೋದಾತ್ತ ಯುವಕ
ತೆರೆ ಬಿದ್ದರೂ ರಂಗ ಬಿಡದ ಚಿರ ಯುವಕ;
ಹೊತ್ತು ಸುತ್ತುತ್ತಾನೆ ಬಲು ಭಾರಿ ಭೂಗೋಳ,
ಗಂಟೆಗೆಂಬತ್ತು ಮೈಲಿ ಸ್ವಗತ...

ಇಷ್ಟಾಗಿಯೂ ನೆಹರೂ ಅವರಲ್ಲಿದ್ದ ಜಾತ್ಯತೀತತೆ, ಆಧುನಿಕ ಮನೋಭಾವ, ಮಹಿಳೆಯರ ಬಗೆಗಿನ ಕಾಳಜಿ ಇವೆಲ್ಲವನ್ನೂ ಲೋಹಿಯಾ ಮರೆತಿರಲಿಲ್ಲ. ಆದರೆ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಜೈಲುವಾಸ ಅನುಭವಿಸುತ್ತಿದ್ದಾಗ ನೆಹರುವಿನಲ್ಲಿದ್ದ ಕ್ರಾಂತಿಕಾರಿ ಗುಣ ಅಧಿಕಾರ ರಾಜಕಾರಣದಲ್ಲಿ ಕಣ್ಮರೆಯಾಗಿದ್ದು ಲೋಹಿಯಾರಲ್ಲಿ ವಿಷಾದ, ಸಿಡಿಮಿಡಿ ಹುಟ್ಟಿಸುತ್ತಿತ್ತು. ಯಾವುದೇ ಪ್ರಧಾನಮಂತ್ರಿಯ ಕೈಯಲ್ಲಿ ಎಣೆಯಿಲ್ಲದ ಅಧಿಕಾರವಿರುವುದು ಪ್ರಜಾಪ್ರಭುತ್ವಕ್ಕೆ ಅಪಾಯಕರ ಎಂಬುದನ್ನು ಲೋಹಿಯಾ ಅವತ್ತೇ ಸ್ಪಷ್ಟವಾಗಿ ಗುರುತಿಸಿದ್ದರು:

'ಸರಕಾರ ಹಾಗೂ ಪ್ರತಿಪಕ್ಷಗಳೆರಡಕ್ಕೂ ತಾನೇ ನಾಯಕ ಎಂಬ ಅನಿಸಿಕೆಗೆ ನೆಹರು ಎಷ್ಟರಮಟ್ಟಿಗೆ ಒಗ್ಗಿಹೋಗಿದ್ದಾರೆಂದರೆ, ಅವರಿಗೇನಾದರೂ ಅಪ್ಪಟ ವಿರೋಧಪಕ್ಷೀಯ ಭಾಷೆ ಕಿವಿಗೆ ಬಿದ್ದರೆ ಸಾಕು, ಸಿಟ್ಟಿಗೇಳುತ್ತಾರೆ. ಆದರೆ ಬೇರೆಲ್ಲದರಲ್ಲೂ ಮಾಡುವಂತೆ ಈ ವಿಚಾರದಲ್ಲೂ ತಂತ್ರಗಾರಿಕೆ ತೋರುತ್ತಾರೆ. ಈಗಾಗಲೇ ನಾನು ಅವರ ಮೇಲೆ ಬಲಪ್ರಯೋಗ ಮಾಡಲು ಸಿದ್ಧನಿರುವೆನೋ ಎಂಬ ಭಾವನೆ ಮೂಡಿಸಿಬಿಟ್ಟಿದ್ದಾರೆ. ಅದು ಎಷ್ಟು ಸುಳ್ಳೆಂಬುದು ಎಲ್ಲರಿಗೂ ಗೊತ್ತು. ನಾನು ಪ್ರಹ್ಲಾದನಿಂದ ಸಾಕ್ರೆಟಿಸ್, ಗಾಂಧೀಜಿಯವರೆಗೂ ಸಾಗಿ ಬಂದಿರುವ ಪರಂಪರೆಗೆ ಸೇರಿದವನು. ಯಾವುದೇ ಶಸ್ತ್ರ ಅಥವಾ ಬಲಪ್ರಯೋಗದ ನೆರವಿಲ್ಲದೆಯೇ ಮಾನವನು ದೌರ್ಜನ್ಯ ಮತ್ತು ಶೋಷಣೆಯ ವಿರುದ್ಧ ದನಿಯೆತ್ತುವ ಕಲೆಯನ್ನು ಕರಗತ ಮಾಡಿಕೊಳ್ಳಲು ಬಯಸುವವನು.'

ಲೋಹಿಯಾರ ನಿಷ್ಠುರ ಪರೀಕ್ಷೆಯಲ್ಲಿ ನೆಹರೂ ತಪ್ಪುಗಳು ಎದ್ದು ಕಾಣುತ್ತಿದ್ದುದು ಸಹಜವಾಗಿತ್ತು. ಆದರೆ ನೆಹರೂರನ್ನು ಅವರ ನಂತರದ ಪ್ರಧಾನಮಂತ್ರಿಗಳ ಜೊತೆ ಹೋಲಿಸಿ ನೋಡಿದರೆ, ನೆಹರು ಭಾರತ ಕಂಡ ಅತ್ಯಂತ ಆಧುನಿಕ ಮನಸ್ಸಿನ, ಜಾತ್ಯತೀತರಾದ, ಸುಶಿಕ್ಷಿತ ಪ್ರಧಾನಿಯಾಗಿದ್ದರು ಎಂಬುದು ಎದ್ದು ಕಾಣತೊಡಗುತ್ತದೆ. ಇಂಗ್ಲಿಷ್ ಭಾಷೆಯಲ್ಲಿ ಉತ್ತಮ ಲೇಖಕರೂ ಆಗಿದ್ದ ನೆಹರು ಸುಸಂಸ್ಕೃತ ಪ್ರಧಾನಮಂತ್ರಿಯಾಗಿದ್ದರು. ಈ ಇಬ್ಬರು ದಿಗ್ಗಜ ರಾಜಕಾರಣಿಗಳ ನಿರ್ಗಮನದ ನಂತರದ ಭಾರತದ ರಾಜಕೀಯ ಚರಿತ್ರೆಯನ್ನು ವಸ್ತುನಿಷ್ಠವಾಗಿ ನೋಡುವವರಿಗೆ ನೆಹರೂ ಸತ್ವ, ಲೋಹಿಯಾ ನಿಷ್ಠುರತೆ ಎರಡೂ ಸ್ಪಷ್ಟವಾಗುತ್ತವೆ.

ಒಂದು ಕಾಲಕ್ಕೆ ಲೋಹಿಯಾರಂತೆಯೇ ನೆಹರೂ ಟೀಕಾಕಾರರಾಗಿದ್ದ ಲಂಕೇಶ್ 1993ರಲ್ಲಿ 'ಶೂದ್ರ' ಪತ್ರಿಕೆ ನಡೆಸಿದ ವಿಚಾರ ಸಂಕಿರಣದಲ್ಲಿ ಹೇಳಿದ ಮಾತು: 'ಸರ್ದಾರ್ ಪಟೇಲ್ ಮತ್ತು ನೆಹರೂ ನಡುವೆ, ಪ್ರಧಾನಿಯಾಗಲು ನೆಹರುವನ್ನು ಗಾಂಧೀಜಿ ಆಯ್ಕೆ ಮಾಡಿಕೊಂಡಿದ್ದಕ್ಕೆ ಕಾರಣವಿತ್ತು: ಅದೇನೆಂದರೆ, ನೆಹರು ಜಾತ್ಯತೀತವಾಗಿ ಎಲ್ಲರನ್ನೂ ಒಟ್ಟಾಗಿಸಿ ದೇಶ ಕಟ್ಟಬಲ್ಲರೆಂಬ ನಂಬಿಕೆ.' ನೆಹರೂರನ್ನು ಇವತ್ತಿಗೂ ಟೀಕಿಸುವ ಲೋಹಿಯಾವಾದಿಗಳು; ನೆಹರೂ ಕೊಡುಗೆಯನ್ನೇ ಮರೆತಂತಿರುವ ಅಂಬೇಡ್ಕರ್‌ವಾದಿಗಳು; ಲೋಹಿಯಾ ಬಡಿಗೆಯನ್ನು ಬಳಸಿ ನೆಹರೂರನ್ನು ಹಣಿಯಲೆತ್ನಿಸುವ ಕೋಮುವಾದಿಗಳು; ನೆಹರೂರನ್ನು ಓದದೇ ಭಜಿಸುವ ಕಾಂಗ್ರೆಸ್ಸಿಗರು... ಎಲ್ಲರೂ ಲಂಕೇಶರ ಈ ಗ್ರಹಿಕೆಯನ್ನು ಸರಿಯಾಗಿ ಅರಿಯಬೇಕಾಗಿದೆ.

ತಮ್ಮ ನಿತ್ಯದ ವಿಮರ್ಶೆ ಮೀರಿ ನೆಹರೂ ವ್ಯಕ್ತಿತ್ವವನ್ನು ಗ್ರಹಿಸಬೇಕೆಂದು ಸ್ವತಃ ಲೋಹಿಯಾರೇ ಸೂಚಿಸಿದ್ದರು. ಇದನ್ನು ಆಗ ಸಮಾಜವಾದಿ ಪಕ್ಷದಲ್ಲಿದ್ದ ಕೋಣಂದೂರು ಲಿಂಗಪ್ಪ ನೆನೆಯುತ್ತಾರೆ: ಶಾಂತವೇರಿ ಗೋಪಾಲಗೌಡರು ಶಾಸಕರಾಗಿದ್ದ ಕಾಲದಲ್ಲಿ ಲೋಹಿಯಾ ಬೆಂಗಳೂರಿನ ಶಾಸಕರ ಭವನದಲ್ಲಿ ಉಳಿದುಕೊಂಡಿದ್ದರು. ಅಲ್ಲಿದ್ದ ಸಮಾಜವಾದಿ ನಾಯಕರೊಬ್ಬರು ನೆಹರೂರನ್ನು ಟೀಕಿಸಿದರೆ ಲೋಹಿಯಾಗೆ ಖುಷಿಯಾಗಬಹುದೆಂದು ನೆಹರೂರನ್ನು ಬಯ್ಯತೊಡಗಿದರು.

ಲೋಹಿಯಾಗೆ ಸಿಟ್ಟು ಬಂತು. ಎದ್ದವರೇ, 'ಏನು ತಲೆಹರಟೆ ಮಾತಾಡ್ತಾ ಇದೀಯಯ್ಯಾ? ನನ್ನ ಜಗಳ ಪ್ರೈಂ ಮಿನಿಸ್ಟರ್ ನೆಹರೂ ಜೊತೆಗೇ ಹೊರತು, ಪಂಡಿತ್ ನೆಹರೂ ಜೊತೆಗಲ್ಲ; ಪಂಡಿತ್‌ಜೀ ದೊಡ್ಡ ಮನುಷ್ಯರು. ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಮಾಡಿರೋ ತ್ಯಾಗ ಎಂಥದೂಂತ ನಿನಗೆ ಗೊತ್ತಿದೆಯೆ?' ಎಂದು ರೇಗಿ ಅವರಿಗೆ ಗುದ್ದಲು ಹೋದರು. 'ಇವನನ್ನು ಹೊರಗೆ ಕಳಿಸಿ' ಎಂದು ರೇಗಿದರು.

ಅವತ್ತು ನೆಹರೂ ನಿಂದನೆ ಕೇಳಿ ಹರಿಹಾಯ್ದಿದ್ದ ಲೋಹಿಯಾ ಕೈಲಿ ಗುದ್ದಿಸಿಕೊಳ್ಳಲಿದ್ದವರು ಈಶ್ವರಪ್ಪ ಎಂಬ ಆ ಕಾಲದ ಸಮಾಜವಾದಿ ರಾಜಕಾರಣಿ! ನೆಹರೂ ಟೀಕೆಗಾಗಿ ಮಾತ್ರ ಲೋಹಿಯಾ ಹೆಸರು ಪಠಿಸುವ ರಾಜಕೀಯ ಪಕ್ಷಗಳು ಲೋಹಿಯಾ–ನೆಹರು ನಡುವಣ ಸಂಬಂಧದಲ್ಲಿದ್ದ ಘನತೆಯನ್ನು ಅರ್ಥ ಮಾಡಿಕೊಳ್ಳಬೇಕು!

***

ನೆಹರು–ಲೋಹಿಯಾ ನಡುವಣ ಚುನಾವಣೆ ಭಾರತದಲ್ಲಿ ಚರ್ಚೆಯ ಬಿಂದುವಾಯಿತು; ಭಾರತದಾಚೆಗೆ ಜಗತ್ತಿನ ಗಮನವನ್ನೂ ಸೆಳೆಯಿತು. ಆ ಹೊತ್ತಿಗಾಗಲೇ ನೆಹರು ಜಗತ್ತಿನ ದೊಡ್ಡ ನಾಯಕರಾಗಿ ಹೆಸರುವಾಸಿಯಾಗಿದ್ದರು. ಲೋಹಿಯಾ ಕೂಡ ವಿಶ್ವದ ಸಮಾಜವಾದಿ ಚಿಂತಕರ ಸಾಲಿಗೆ ಸೇರತೊಡಗಿದ್ದರು. 1961ರಲ್ಲಿ ಗ್ರೀಸ್ ದೇಶದ ಅಥೆನ್ಸ್‌ನಲ್ಲಿ ಸಮಾಜವಾದಿಗಳ ಸಮ್ಮೇಳನದಲ್ಲಿ ಲೋಹಿಯಾ ತಮ್ಮ 'ಸಪ್ತಕ್ರಾಂತಿ' ಚಿಂತನೆಗಳನ್ನು ಮಂಡಿಸಿದ್ದರು:

1. ಸ್ತ್ರೀ–ಪುರುಷ ಸಮಾನತೆ.
2. ವರ್ಣಭೇದದಿಂದ ಹುಟ್ಟಿದ ಅಸಮಾನತೆಯ ನಾಶ.
3. ಹುಟ್ಟಿನ ಆಧಾರದಿಂದ ಬಂದ ಅಸಮಾನತೆಯ ನಿವಾರಣೆ.
4. ವಿದೇಶಿ ದಬ್ಬಾಳಿಕೆಯ ಅಂತ್ಯ, ಹಾಗೂ ವಿಶ್ವ ಸರ್ಕಾರದ ಸ್ಥಾಪನೆ.
5. ವ್ಯಕ್ತಿಗತ ಸಂಪತ್ತಿನಿಂದ ಉದ್ಭವಿಸುವ ಆರ್ಥಿಕ ಅಸಮಾನತೆಯ ನಾಶ ಹಾಗೂ ಸಮಾನತೆಯ ಸಾಧನೆ.
6. ಶಸ್ತ್ರಾಸ್ತ್ರಗಳ ಮೇಲಿನ ಹತೋಟಿ, ಮತ್ತು ಸಾರ್ವಜನಿಕ ಕಾನೂನುಭಂಗ ತತ್ವದ ಪ್ರತಿಷ್ಠಾಪನೆ.
7. ವ್ಯಕ್ತಿಸ್ವಾತಂತ್ರ್ಯದ ಮೇಲೆ ಆಗುವ ಅತಿಕ್ರಮಣದ ವಿರುದ್ಧ ಹೋರಾಟ.

ಕಮ್ಯುನಿಸಂಗಿಂತ ಭಿನ್ನವಾಗಿ, ಭಾರತದ

## ಕಳೆದ ಸಂಚಿಕೆಯಲ್ಲಿ



ಬುದ್ಧ, ಮಹಾವೀರ, ರಾಮ, ಕೃಷ್ಣರಂಥ ವ್ಯಕ್ತಿತ್ವಗಳಿಗೆ ಅಪೂರ್ವ ಒಳನೋಟಗಳ ಹೊಳಪು ನೀಡಿದ ಲೋಹಿಯಾ ಅವರ ಸೃಜನಶೀಲತೆ ಸ್ತ್ರೀಲೋಕದ ಮೇರು ಪಾತ್ರಗಳನ್ನೂ ಬಹು ಆಸ್ಥೆಯಿಂದ ಮುಖಾಮುಖಿಯಾಯಿತು. ದ್ರೌಪದಿ, ಸಾವಿತ್ರಿ, ಸೀತೆ, ರತಿ ಹಾಗೂ ಕರ್ನಾಟಕದ ಅಕ್ಕಮಹಾದೇವಿ ಅವರ ಬಗೆಗಿನ ಲೋಹಿಯಾ ಚಿಂತನೆಗಳು ಅಪ್ಪಟ ಕಲಾವಿದನೊಬ್ಬ ಪುರಾಣ–ಇತಿಹಾಸದ ಪಾತ್ರಗಳನ್ನು ತನ್ನ ಸಂದರ್ಭದಲ್ಲಿ ಹಾಗೂ ಸೃಜನಶೀಲ ವಿಲಾಸದಲ್ಲಿ ರೂಪಿಸಿದ ಕಲಾಕೃತಿಗಳಂತಿದ್ದವು. ದ್ರೌಪದಿ ಹಾಗೂ ಸಾವಿತ್ರಿಯರ ನಡುವಿನ ಆಯ್ಕೆಯ ಜಿಜ್ಞಾಸೆಯಲ್ಲಿ ಅವರು ಮಂಡಿಸಿದ ಮೀಮಾಂಸೆ ಎರಡೂ ಪಾತ್ರಗಳ ಘನತೆಯನ್ನು ಹೆಚ್ಚಿಸುವಂತಿದೆ. ಸಮಾಜವಾದಿ ಚಿಂತಕನ ಈ ವಿಶ್ಲೇಷಣೆಗಳು ಈ ಹೊತ್ತಿನ ಸ್ತ್ರೀವಾದಿ ಚಿಂತಕರನ್ನೂ ಸೆಳೆಯುವಂತಿವೆ. ಲೋಹಿಯಾ ಅವರ ಮನಸ್ಸನ್ನು ಪುರಾಣ, ಚರಿತ್ರೆಗಳು ಇನ್ನಿಲ್ಲದಂತೆ ಸೆಳೆದರೂ, ಅವರು ವರ್ತಮಾನದ ವಿದ್ಯಮಾನಗಳಿಂದ ವಿಮುಖರಾಗಿರಲಿಲ್ಲ. 1962ರ ಸಾರ್ವತ್ರಿಕ ಚುನಾವಣೆಯಲ್ಲಿ ಸಮಾಜವಾದಿ ಪಕ್ಷವನ್ನು ಸಕ್ರಿಯವಾಗಿಸುವ ಪ್ರಯತ್ನದಲ್ಲಿ ನಿರತರಾಗಿದ್ದರು.